ಕರ್ನಾಟಕ ಸರ್ಕಾರ

ಏಪ್ರಿಲ್ 7, 2016

# ಯುಗಾದಿ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ




ಬೆಂಗಳೂರು, ಏಪ್ರಿಲ್ 7:

ಸಡಗರದ ಸಂಭ್ರಮದ ಯುಗಾದಿ ಹಬ್ಬದ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಶುಭ ಕೋರಿದ್ದಾರೆ.

ಯುಗಾದಿ ಹಬ್ಬ ಹೊಸತನದ ಸಂಕೇತ. ಆರೋಗ್ಯಕ್ಕೆ ಬೇವು ! ಆನಂದಕ್ಕೆ ಬೆಲ್ಲ !! ಯುಗಾದಿಯ ಸಂದರ್ಭದಲ್ಲಿ ಬೇವು ಮತ್ತು ಬೆಲ್ಲದ ಮಿಶ್ರಣವನ್ನು ಮೆಲ್ಲುವ ನಮ್ಮ ಸಂಪ್ರದಾಯವು ಜೀವನದಲ್ಲಿ ಕಷ್ಟ ಮತ್ತು ಸುಖವನ್ನು ಸಮಾನವಾಗಿ ಸ್ವೀಕರಿಸಬೇಕೆಂಬುದನ್ನು ಪ್ರತಿಪಾದಿಸುತ್ತದೆ. ಚೈತ್ರದ ಚಿಗುರು ಪ್ರಕೃತಿಯ ಸೊಬಗನ್ನು ಎಲ್ಲೆಡೆ ಪಸರಿಸುತ್ತದೆ. ಒಣಗಿದ ಮರಗಳು ಹಸಿರು ಎಲೆಗಳಿಂದ ತುಂಬುತ್ತವೆ. ವಸಂತ ಕಾಲದ ವಿಶೇಷ ಮಾವು ಬೆಳೆಯ ಆಗಮನ. ರಾಜ್ಯದ ಬಹುತೇಕ ಪ್ರದೇಶಗಳು ಬರದ ಛಾಯೆಯಿಂದ ಬಳಲುತ್ತಿದ್ದರೂ, ನಮ್ಮಲ್ಲಿ ಒಳ್ಳೆಯ ಜನ ಹಾಗೂ ಒಳ್ಳೆಯತನಕ್ಕೆ ಬರವಿಲ್ಲ ಎಂಬುದನ್ನು ಸಾಬೀತುಪಡಿಸಲು ಹಾಗೂ ನಮ್ಮ ಪರಿಸರದಲ್ಲಿ ಕಾಣುವ ನೈಸರ್ಗಿಕ ಬದಲಾವಣೆಗಳನ್ನು ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ಎದುರಿಸುವ ಶಕ್ತಿಯನ್ನು ದೊರಕಿಸಿಕೊಡಲು ಯುಗಾದಿ ಹಬ್ಬವು ನಾಡಿನ ಜನತೆಗೆ ಪ್ರೇರಣೆ ಹಾಗೂ ಸ್ಫೂರ್ತಿಯನ್ನೀಯಲಿ ಎಂದು ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

***********

ಡಿ ಪಿ ಎಂ